ಈ ಜಿಲ್ಲೆಯಿಂದ ಶೇಖರಣೆಯಾಗುತ್ತಿರುವ ಹಾಲಿಗೆ ಮಾರುಕಟ್ಟೆ ಇರುವುದರಿಂದ ಮತ್ತು ಹೆಚ್ಚುವರಿ ಹಾಲಿದ್ದರೆ ಅದರ ಪರಿವರ್ತನೆಗಾಗಿ ನೆರೆಯ ಜಿಲ್ಲೆಗಳಲ್ಲಿ ಪರಿವರ್ತನಾ ಸೌಲಭ್ಯವಿರುವುದರಿಂದ ಪಶು ಆಹಾರ ಬೇಡಿಕೆಯನ್ನು ಹಾಲು ಇರುವ ಕಾರ್ಖಾನೆಗಳಿಂದ ಪೂರೈಕೆಯಾಗುತ್ತಿರುವುದರಿಂದ.

ಅರಣ್ಯ ಪ್ರದೇಶದಲ್ಲಿ ತೆಗೆಯುತ್ತಿರುವ ಗ್ರಾನೈಟ್ ಕಲ್ಲಿನ ಬಗ್ಗೆ

2ಎ - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಪ್ರದೇಶದಲ್ಲಿ ತೆಗೆಯುತ್ತಿರುವ ಗ್ರಾನೈಟ್ ಕಲ್ಲಿನ ಕೆಲಸವನ್ನು ನಿಲ್ಲಿಸಲಾಗಿದೆಯೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಹೌದು.

ಉಳ್ಳಾಲ ಮತ್ತು ಬೆಂಗ್ರೆಯ ಮಂಗಳೂರು ಬಂದರು ಅಲಿ ತದೆಗೋಡೆಯ ಕೆಲಸ ಕುರಿತು

37 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಬಂದರು ಮತ್ತು ಮಿನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗ್ರೆ ಮತ್ತು ಉಳ್ಳಾಲದಲ್ಲಿ ಮಂಗಳೂರು ಬಂದರು ಅಲೆತಡೆಗೋಡೆ (ಬ್ರೇಕ್‌ವಾಟರ್) ಕೆಲಸ ತುಂಬಾ ನಿಧಾನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಕೆಲಸ ಪೂರೈಕೆ ಯಾವಾಗ ಮಾಡಲಾಗುವುದು?

ಇ) ಈಗ ಎಲ್ಲಿಯವರೆಗೆ ಈ ಕೆಲಸವಾಗಿರುತ್ತದೆ.

ಈ) ಈವರೆಗೆ ಎಷ್ಟು ಹಣ ಖರ್ಚಾಗಿದೆ ಹಾಗೂ ಅದರ ಪೂರೈಕೆಗೆ ಬೇಕಾಗುವ ಹಣವೆಷ್ಟು.

ಶ್ರೀ ವಸಂತ ವಿ. ಸಾಲಿಯಾನ (ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು):

ಅ) ಹೌದು

ಆ) ಡಿಸೆಂಬರ್ 1994ರ ಸಮಯಕ್ಕೆ

ಇ) ದಕ್ಷಿಣ 405 ಮೀಟರ್ ಮತ್ತು ಉತ್ತರ 375 ಮೀಟರ್ (ಅರ್ಧೋಕ್ತವಚ ಎಲ್ಲಿದೆ)

ಈ) ಈವರೆಗೆ ರೂ.280 ಲಕ್ಷ ಖರ್ಚಾಗಿದೆ. ಇನ್ನೂ ರೂ.120.00 ಲಕ್ಷ ಬೇಕಾಗುತ್ತದೆ.

ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆ

82 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಚನ್ನಪಟ್ಟಣ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯನ್ನು 100 ಹಾಸಿಗೆಗಳಿಂದ 200 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಭರವಸೆ ನೀಡಿದ್ದು ನಿಜವೇ?

ಆ) ಹಾಗಿದ್ದರೆ ಈ ವಿಷಯದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?